**ದಿನಾಂಕ:18.12.2025 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.ಎನ್.ವಿ.ಜೆ., ವಕೀಲರಿಂದ:**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಗೃಹಣಿ. ನನ್ನ ಪತಿಯು ಕೆ ಇ ಬಿ ಯಲ್ಲಿ ಕೆಲಸ ಮಾಡುತ್ತಿದ್ದು, ಪ್ರಸ್ತುತದಲ್ಲಿ ನಿವೃತ್ತಿ ಹೊಂದಿರುತ್ತಾರೆ. ನಾನು ದೊಡ್ಡಬಳ್ಳಾಪುರದಲ್ಲಿ ವಾಸವಿರುತ್ತೇನೆ. ನನ್ನ ಪತಿಯು ನಿವೃತ್ತರಾದ ನಂತರ ಪಶುಪಾಲನೆ ಮಾಡುತ್ತಿದ್ದಾರೆ.

ನನ್ನ ಮಗನ ಮದುವೆಯು ಗೋಪಾಲಪುರ ಗ್ರಾಮದ ಹೆಣ್ಣಿನ್ನೊಂದಿಗೆ ಆಗಿದ್ದು, ಆ ಕಾರಣದಿಂದ ಪ್ರತಿವಾದಿ ಪರಿಚಿತರಾದರು. ಕೇವಲ ಮದುವೆಯಾದ ಕಾರಣ ಪರಿಚಯವಾಗಿದ್ದು ಬೇರೆ ಯಾವುದೇ ರೀತಿಯಲ್ಲಿ ಪ್ರತಿವಾದಿಯ ಪರಿಚಯವಿಲ್ಲ. ಪ್ರತಿವಾದಿಯ ಕುಟುಬಂದವರ ಬಗ್ಗೆ ನನಗೆ ಮಾಹಿತಿ ಇಲ್ಲ, ಆದರೆ ಅವರ ಪರಿಚಯ 5 ವರ್ಷಗಳಿಂದ ಇದೆ. ದಾವಾ ಆಸ್ತಿಯು ಗೋಪಾಲಸ್ವಾಮಿ ದೇವಸ್ಥಾನದ ಮುಂದೆ ಇರುವ ಸ್ವತ್ತು ಅದರ ಚಕ್ಕುಬಂದಿ ಹೇಳಲು ಆಗುವುದಿಲ್ಲ. ನಮ್ಮ ಹಾಗೂ ಪ್ರತಿವಾದಿಯು ನಡುವೆ ಹಣಕಾಸಿನ ವ್ಯವಹಾರ ಆಗಿಲ್ಲ. ದಿನಾಂಕ ನೆನಪಿಲ್ಲ ಆದರೆ 4 ವರ್ಷಗಳ ಹಿಂದೆ ಪ್ರಸ್ತುತ ಕ್ರಯದ ಕರಾರು ಮಾಡಿಕೊಂಡಿದ್ದೇವು. ಗೋಪಾಲಪುರದಲ್ಲಿಯೇ ಪ್ರಸ್ತುತ ಕ್ರಯದ ಕರಾರಿನ ಮಾತುಕತೆಯಾಗಿತ್ತು. ಆ ಸಮಯದಲ್ಲಿ ಪ್ರತಿವಾದಿ ಮತ್ತು ಇನ್ನೂ ಇಬ್ಬರು ಮೂವರು ಜನ ಸೇರಿದ್ದರು ಆದರೆ ಅವರುಗಳ ಹೆಸರು ನನಗೆ ಗೊತ್ತಿಲ್ಲ.

ಪ್ರತಿವಾದಿಯು ಪತ್ರ ಬರೆದು ನೀಡಿದ್ದಾರೆ ಆದರೆ ಅದರ ಬಗ್ಗೆ ನಿಖರವಾಗಿ ನನ್ನ ಮಗ ಮತ್ತು ಸೊಸೆಗೆ ಗೊತ್ತಿರುತ್ತದೆ.

(ಈ ಅಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು. )

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.